ಓ ಎಸ್ ನಂ. 207/2022
ಪಿ ಡಬ್ಲ್ಯು 1
ದಿನಾಂಕ 13-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ</u>

ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಸುಮಾರಾಗಿ ಬರುತ್ತದೆ. ಯಾವ ಉದ್ದೇಶಕ್ಕಾಗಿ ದಾವೆ ಹೂಡಲಾಗಿದೆ ಎಂಬ ವಿಚಾರ ನನಗೆ ಗೊತ್ತಿದೆ. ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಮೃತ ಪುಟ್ಟಸ್ವಾಮಿ ಮತ್ತು 1 ನೇ ವಾದಿ ಶಾಂತಿರವರು ನನಗೆ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿ ನಾನು ಮತ್ತು 1 ನೇ ವಾದಿ ಶಾಂತಿ ಆತ್ಮೀಯ ಸ್ನೇಹಿತರಾಗಿದ್ದು, ಮೃತ ಪುಟ್ಟಸ್ವಾಮಿಯವರ ಪರಿಚಯ ನಮಗೆ ಇರಲಿಲ್ಲ, ಆದರೆ ಅವರು ಸ್ವತ್ತನ್ನು ಮಾರಾಟ ಮಾಡುವ ವಿಚಾರ ಗೊತ್ತಾದ ನಂತರ ನಾನು ಮತ್ತು 1 ನೇ ವಾದಿ ಸೇರಿ ಸ್ವತ್ತನ್ನು ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಮತ್ತು 1 ನೇ ವಾದಿ ಸುಮಾರು 35 ವರ್ಷಗಳಿಂದ ಪರಿಚಯಸ್ಥರಾಗಿರುತ್ತೇವೆ. ಆಸ್ತಿಯನ್ನು ಖರೀದಿ ಮಾಡುವ ಮೊದಲು ಮೃತ ಪುಟ್ಟಸ್ವಾಮಿಯವರ ಪರಿಚಯ ನನಗೆ ಇರಲಿಲ್ಲ, ಆನಂತರ ಪರಿಚಯ

ಆಗಿರುತ್ತದೆ. ನಾನು ಕ್ರಯಪತ್ರ ಮಾಡಿಸಿಕೊಂಡಿರುವ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಸದರಿ ಕ್ರಯದ ವ್ಯವಹಾರ ಆಗುವ ಮೊದಲು ದಾಖಲಾತಿಗಳನ್ನು ಪರಿಶೀಲಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಪುಟ್ಟಸ್ವಾಮಿರವರು ರಾಧಮ್ಮರವರಿಂದ 1995 ರಲ್ಲಿ ದಾವಾ ಆಸ್ತಿಯನ್ನು ಖರೀದಿಸಿರುವ ವಿಚಾರ ನಾನು ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. 1995 ರಲ್ಲಿ ಪುಟ್ಟಸ್ವಾಮಿರವರು ದಾವಾ ಆಸ್ತಿಯನ್ನು ಖರೀದಿಸಿರುವ ವಿಚಾರವನ್ನು ನಿಪಿ-1 ರ ಕ್ರಯಪತ್ರದಲ್ಲಿ ನಮೂದು ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಸದರಿ ಕ್ರಯಪತ್ರದಲ್ಲಿ ಆ ವಿಚಾರ ನಮೂದು ಇರುವುದಿಲ್ಲ, ಆದರೆ ಪುಟ್ಟಸ್ವಾಮಿರವರು ಆ ವಿಚಾರವನ್ನು ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ದಿನಾಂಕ 14/05/1997 ರಂದು ನಿಪಿ-1 ರ ಕ್ರಯಪತ್ರವಾಗುವ ಪೂರ್ವದಲ್ಲಿ ನನ್ನ ಮತ್ತು ಮೃತ ಪುಟ್ಟಸ್ವಾಮಿರವರ ನಡುವೆ ಯಾವುದಾದರೂ ಕರಾರು ಆಗಿತ್ತಾ ಎಂದರೆ ಸಾಕ್ಷಿ ನನಗೆ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗಳಾದ ನಾವು ಚಿಕ್ಕಮಗಳೂರಿನಲ್ಲಿ ವಾಸ ಇದ್ದು, ಪ್ರತಿವಾದಿಗಳು ಸಖರಾಯಪಟ್ಟಣ ಜಾನ್ಸಾಲೆ ಎಸ್ಟೇಟ್ ನಲ್ಲಿ ವಾಸ ಇದ್ದಾರೆ ಎಂದರೆ ಸರಿ. ನಿಪಿ-1 ರ ಕ್ರಯಪತ್ರವು ಬರವಣಿಗೆಯಾಗುವ ಎಷ್ಟು ದಿನಗಳ ಪೂರ್ವದಲ್ಲಿ ದಾವಾ ಆಸ್ತಿಯ ಖರೀದಿಯ ಬಗ್ಗೆ

ಮಾತುಕತೆಯಾಗಿತ್ತು ಎಂದರೆ ಸಾಕ್ಷಿ ಮಾತುಕತೆಯಾಗಿದೆ ಆದರೆ ನಿಖರವಾಗಿ ಯಾವಾಗ ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಸರ್ವೆ ನಂಬರು ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ಹೌದು ಹಳೆಯ ಸರ್ವೆ ನಂ.74/ಪಿ ಹೊಸ ನಂ.1351 ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಖರೀದಿಸುವ ಮೊದಲು ನಾನು ದಾವಾ ಆಸ್ತಿಯನ್ನು ನೋಡಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮೃತ ಪುಟ್ಟಸ್ವಾಮಿರವರಿಗೆ ಹೆಂಡತಿ ಮತ್ತು ಮಕ್ಕಳು ಇರುವ ವಿಚಾರ ನನಗೆ ಗೊತ್ತಿತ್ತಾ ಎಂದರೆ ಸಾಕ್ಷಿ ಹೌದು ಅವರಿಗೆ ಸಣ್ಣ ಮಕ್ಕಳು ಇದ್ದರು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚಕ್ಕುಬಂದಿಯನ್ನು ಹೇಳಬಲ್ಲೆ ಪೂರ್ವಕ್ಕೆ ಈಶ್ವರಪ್ಪರವರ ಜಮೀನು ಪಶ್ಚಿಮಕ್ಕೆ ಹನುಮಂತಪ್ಪರವರ ಜಮೀನು ಉತ್ತರಕ್ಕೆ ಹಳ್ಳ ಮತ್ತು ಪದ್ಮನಾಭರವರ ಬೇಲಿ ಮತ್ತು ದಕ್ಷಿಣಕ್ಕೆ ಕುರಿದೊಡ್ಡಿ ರಸ್ತೆ ಇರುತ್ತದೆ. ಮೇಲೆ ಹೇಳಿದ ಚಕ್ಕುಬಂದಿಯ ಆಸ್ತಿಯನ್ನು ನನಗೆ ಯಾರು ಕೊಡಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಕ್ರಯಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವವರೇ ಕೊಡಿಸಿದ್ದು ಎಂದು ನುಡಿಯುತ್ತಾರೆ. ಪ್ರಸ್ತುತ ಮೇಲೆ ಹೇಳಿದ ಚಕ್ಕುಬಂದಿಯ ಆಸ್ತಿಯ ಸ್ವಾಧೀನದಲ್ಲಿ ಯಾರು ಇದ್ದಾರೆ ಎಂದರೆ ಸಾಕ್ಷಿ ವಾದಿಗಳಾದ ನಾವುಗಳೇ ಎಂದು

ನುಡಿಯುತ್ತಾರೆ. ನಿಪಿ-1 ರ ಕ್ರಯಪತ್ರದಲ್ಲಿರುವ ಚಕ್ಕುಬಂದಿ ಮತ್ತು ವಾದಪತ್ರದಲ್ಲಿರುವ ಚಕ್ಕುಬಂದಿಯಲ್ಲಿ ಎರಡಲ್ಲೂ ಸಹ ಪೂರ್ವಕ್ಕೆ ಈಶ್ವರಪ್ಪರವರ ಜಮೀನು ಎಂದು ತೋರಿಸಲಾಗಿದೆ ಎಂದರೆ ಸರಿ. ಪೂರ್ವಕ್ಕೆ ಕುರಿದೊಡ್ಡಿ ರಸ್ತೆ ಇಲ್ಲವಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಹಳ್ಳ ಇಲ್ಲ ಎಂದರೆ ಸರಿ. ಉತ್ತರಕ್ಕೆ ಹಳ್ಳ ಮತ್ತು ಪದ್ಮನಾಭರವರ ಬೇಲಿ ಇಲ್ಲ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಕ್ರಯಪತ್ರ ಮತ್ತು ವಾದಪತ್ರದಲ್ಲಿ ದಕ್ಷಿಣಕ್ಕೆ ಹಳ್ಳ ಮತ್ತು ಪದ್ಮನಾಭರವರ ಬೇಲಿ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಕ್ರಯಕ್ಕೆ ಖರೀದಿ ಮಾಡುವ ಕಾಲಕ್ಕೆ ದಾವಾ ಆಸ್ತಿಯು ನಿಖರವಾಗಿ ಯಾವ ಸರ್ವೆ ನಂಬರಿನಲ್ಲಿತ್ತು ಎಂದು ನಾನು ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ಹಳೆಯ ಸರ್ವೆ ನಂ. 74/ಪಿ ಎಂದು ನುಡಿಯುತ್ತಾರೆ. ದಿನಾಂಕ 14/05/1997 ಕ್ಕೆ ದಾವಾ ಆಸ್ತಿಯನ್ನು ಖರೀದಿ ಮಾಡಲಾಗಿದೆ ಎಂದು ಹಾಕಿರುವ ಕ್ರಯಪತ್ರಕ್ಕೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿ ಮೃತ ಪುಟ್ಟಸ್ವಾಮಿರವರೇ ಮಾಹಿತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಪ್ರಸ್ತುತ ಯಾವ ಸರ್ವೆ ನಂಬರಿನಲ್ಲಿದೆ ಎಂದರೆ ಸಾಕ್ಷಿ 1351 ಎಂದು ನುಡಿಯುತ್ತಾರೆ. ಪ್ರಸ್ತುತ ದಾವಾ ಆಸ್ತಿ ಯಾರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸಾಕ್ಷಿ ಸದರಿ ಸ್ವತ್ತನ್ನು ಖರೀದಿಸಿದ ನಂತರದಲ್ಲಿ ನಾವು ಖಾತೆ ಬದಲಾವಣೆ ಮಾಡಲು ಪ್ರಯತ್ನ

ಪಟ್ಟಿದ್ದು ಆನಂತರದಲ್ಲಿ ಪಹಣಿ ತೆಗೆದು ನೋಡಿದಾಗ ಮೃತ ಪುಟ್ಟಸ್ವಾಮಿರವರು 2 ನೇ ಪ್ರತಿವಾದಿಯಾದ ಜಗದೀಶ್ ರವರ ಹೆಸರಿಗೆ ದಾನಪತ್ರ ಮಾಡಿರುವ ವಿಚಾರ ತಿಳಿದುಬಂದಿರುತ್ತದೆ, ಅದರಂತೆ 2 ನೇ ಪ್ರತಿವಾದಿ ಹೆಸರಿಗೆ ಖಾತೆ ಇದೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ವಾದಪತ್ರದಲ್ಲಿ ಮೃತ ಪುಟ್ಟಸ್ವಾಮಿರವರು 2 ನೇ ಪ್ರತಿವಾದಿ ಹೆಸರಿಗೆ ದಾವಾ ಆಸ್ತಿಯನ್ನು ದಾನಪತ್ರ ಮಾಡಿರುವ ವಿಚಾರವನ್ನು ಹೇಳಿರುತ್ತೇನೆ ಎಂದರೆ ಸರಿ. ಮೃತ ಪುಟ್ಟಸ್ವಾಮಿರವರು ದಿನಾಂಕ 24/08/2016 ರಲ್ಲಿ 2 ನೇ ಪ್ರತಿವಾದಿ ಹೆಸರಿಗೆ ದಾನಪತ್ರ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಪಹಣಿ ತೆಗೆದು ನೋಡಿದಾಗ ಆ ವಿಚಾರ ನನಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನಾನು ಪಹಣಿ ನೋಡಿದ ಸಂದರ್ಭದಲ್ಲಿ ಸದರಿ ದಾನಪತ್ರವನ್ನು ನೊಂದಣಿ ಕಚೇರಿಯಿಂದ ಪಡೆದು ಪರಿಶೀಲಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲ ನಾನು ಪಹಣಿಯನ್ನು ಮಾತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ದಾನಪತ್ರವು ಸರ್ವೆ ನಂ.1195 ರ 2 ಎಕರೆ 30 ಗುಂಟೆ ಆಸ್ತಿಗೆ ಸಂಬಂದಪಟ್ಟಂತೆ ಆಗಿರುತ್ತದೆ ಎಂದರೆ ಸುಳ್ಳು. ಪೂರ್ವಕ್ಕೆ ಕುರಿದೊಡ್ಡಿ ರಸ್ತೆ, ಪಶ್ಚಿಮಕ್ಕೆ ಹಳ್ಳ, ದಕ್ಷಿಣಕ್ಕೆ ಯಶೋಧಮ್ಮರವರ ಜಮೀನು ಮತ್ತು ಉತ್ತರಕ್ಕೆ ಹನುಮಂತಪ್ಪರವರ ಜಮೀನು ಈ ಚಕ್ಕುಬಂದಿಯಲ್ಲಿರುವ

ಜಮೀನನ್ನು ಮೃತ ಪುಟ್ಟಸ್ವಾಮಿ 2 ನೇ ಪ್ರತಿವಾದಿ ಹೆಸರಿಗೆ ದಾನಪತ್ರ ಮಾಡಿರುತ್ತಾರೆ ಎಂದರೆ ಸುಳ್ಳು. 1995 ರಲ್ಲಿ ಮೃತ ಪುಟ್ಟಸ್ವಾಮಿಯವರು ಖರೀದಿಸಿದ್ದ ಆಸ್ತಿಯನ್ನೆ 2 ನೇ ಪ್ರತಿವಾದಿಗೆ ದಾನಪತ್ರ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು 1997 ರಲ್ಲಿ ನನಗೆ ಕ್ರಯಪತ್ರ ಮಾಡಿಕೊಟ್ಟ ನಂತರ ಅವರು ಯಾವ ಆಧಾರದಲ್ಲಿ ದಾನಪತ್ರ ಮಾಡಿರುತ್ತಾರೆಂದು ಎಂದು ಸಾಕ್ಷಿ ಪ್ರಶ್ನಾರ್ಥಕವಾಗಿ ನುಡಿದಿರುತ್ತಾರೆ. ಸದರಿ ದಾನಪತ್ರದ ಆಧಾರದಲ್ಲಿ 2 ನೇ ಪ್ರತಿವಾದಿ ಹೆಸರಿಗೆ ಮೇಲೆ ಹೇಳಿದ ಆಸ್ತಿ ಎಂ ಆರ್ ನಂ.48/2016-17 ರಂತೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ದಾನಪತ್ರದಲ್ಲಿರುವ ಆಸ್ತಿಯ ಖಾತೆ ಈಗಲೂ ಸಹ 2 ನೇ ಪ್ರತಿವಾದಿ ಹೆಸರಿನಲ್ಲೇ ಇರುತ್ತದೆ ಎಂದರೆ ಸಾಕ್ಷಿ ದಾನಪತ್ರದಂತೆ ಆಗಿದೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಹೆಸರಿನಲ್ಲಿ ಖಾತೆ ಇರುವ ಬಗ್ಗ ನಿಪಿ-2 ರಂತೆ ನಾನು ಪಹಣಿ ಹಾಜರುಪಡಿಸಿರುತ್ತೇನೆ ಎಂದರೆ ಸರಿ.

ನಿಪಿ-1 ರ ಕ್ರಯಪತ್ರದ ಆಧಾರದ ಮೇಲೆ ಆಸ್ತಿಯ ಖಾತೆಯನ್ನು ನಮ್ಮ ಹೆಸರಿಗೆ ಮಾಡಿಕೊಡುವಂತೆ ಅರ್ಜಿ ಕೊಟ್ಟಿರುತ್ತೇವಾ ಎಂದರೆ ಸಾಕ್ಷಿ ಹೌದು ನಾಡಕಚೇರಿ, ತಾಲ್ಲೂಕು ಕಚೇರಿ ಎರಡೂ ಕಡೆ ಅರ್ಜಿ ಕೊಟ್ಟು ಓಡಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನೀಡಿರುವ ಅರ್ಜಿಯನ್ನು ಮತ್ತು

ನಾಡಕಚೇರಿ ಮತ್ತು ತಾಲ್ಲೂಕು ಕಚೇರಿಯವರು ಅದಕ್ಕೆ ನೀಡಿರುವ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ನನಗೆ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.74/ಪಿ ಹೊಸ ಸರ್ವೆ ನಂಬರಾಗಿ ಯಾವ ಆಧಾರ ಮೇಲೆ ಆಗಿದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಪ್ರಸ್ತುತ ದಾವೆಯನ್ನು ಸಲ್ಲಿಸುವ ಕಾಲಕ್ಕೆ 1 ನೇ ಪ್ರತಿವಾದಿ ಪುಟ್ಟಸ್ವಾಮಿಯವರು ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ದಾವೆ ಸಲ್ಲಿಸಿದ ನಂತರವೇ ಅವರು ಮರಣ ಹೊಂದಿರುವ ಬಗ್ಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಪುಟ್ಟಸ್ವಾಮಿರವರು ಬದುಕಿದ್ದಾಗ ನಿಪಿ-1 ರ ಕ್ರಯಪತ್ರದಂತೆ ಖಾತೆ ಬದಲಾವಣೆ ಮಾಡಿಕೊಡಲು ಅವರ ವಿರುದ್ಧ ಪ್ರಕರಣ ದಾಖಲಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.